## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆ:- 1394/2021

**ಪ್ರಾಸಾಃ 10 ಚಾಸಾಃ- 12**

| | | |
|---|---|---|
| ಸಾಕ್ಷಿಯ ಹೆಸರು | : | ಸುನೇಶ್ |
| ತಂದೆಯ ಹೆಸರು | : | ರಮೇಶ್ |
| ವಯಸ್ಸು | : | 23 ವರ್ಷ |
| ವೃತ್ತಿ | : | ಫ್ಯಾಕ್ಟರಿಯಲ್ಲಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 23.6.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 6 ರಿಂದ 11 ರವರ ಪರಿಚಯ ಇದೆ. ಚಾಸಾ 1, 6 ಮತ್ತು 8 ವಾಲ್ಮೀಕಿ ಜನಾಂಗಕ್ಕೆ ಸೇರಿದ್ದಾರೆ. ಆರೋಪಿತರ ಪರಿಚಯ ಇದೆ. ಆರೋಪಿ 1 ಮತ್ತು 2 ಮುಸ್ಲೀಂ ಜನಾಂಗಕ್ಕೆ ಸೇರಿದ್ದಾರೆ. ಆರೋಪಿ 3 ಮತ್ತು 4 ವಾಲ್ಮೀಕಿ ಜನಾಂಗಕ್ಕೆ ಸೇರಿದ್ದಾರೆ.

ದಿಃ 10-9-2021 ರಂದು ಬನ್ನಿಕಟ್ಟೆ ಪಾರ್ಕ್‌ನಲ್ಲಿ ಚಾಸಾ 1 ರವರು ಗಣೇಶನನ್ನು ಕೂರಿಸಿದ್ದರು. 5 ದಿನಗಳ ಕಾಲ ಗಣೇಶನನ್ನು ಕೂರಿಸಿದ್ದರು. ಚಾಸಾ 7 ಸಹ ಟ್ಯಾಂಕಿ ಸ್ಕೂಲ್ ಹತ್ತಿರ ಗಣೇಶನನ್ನು 3 ದಿನಗಳ ಕಾಲ ಕೂರಿಸಿದ್ದನು. ದಿಃ 12-9-2021 ರಂದು ಚಾಸಾ 7 ರಾತ್ರಿ 10-00 ಗಂಟೆ ಸಮಯದಲ್ಲಿ ತನ್ನ ಗಣೇಶನನ್ನು ವಿಸರ್ಜನೆ ಮಾಡಿ ನಮ್ಮೊಡನೆ ಮಾತನಾಡಲು ನಾವು ಗಣೇಶನನ್ನು ಕೂರಿಸಿದ್ದ ಬನ್ನಿ ಕಟ್ಟೆ ಪಾರ್ಕ್ ಹತ್ತಿರ ಬಂದಿದ್ದ. ಆ ಸಮಯದಲ್ಲಿ 1 ನೇ ಆರೋಪಿಯು ಅಲ್ಲಿಗೆ ಬಂದು ಚಾಸಾ 7 ರವರಿಗೆ ನಾವು ಹೇಳಿದ ಓಣಿಯಲ್ಲಿ ಗಣೇಶನನ್ನು ಏಕೆ ಕರೆದುಕೊಂಡು ಹೋಗಿಲ್ಲ ಎಂದು ಹೇಳಿ ಜಗಳ ಮಾಡಿದ್ದ.

1 ನೇ ಆರೋಪಿ ಕೈಯಿಂದ ಚಾಸಾ 7 ರವರಿಗೆ ತಲೆಗೆ ಹೊಡೆದಿದ್ದ. ಈ ಬಗ್ಗೆ ಚಾಸಾ 8 ರವರು 1 ನೇ ಆರೋಪಿಯನ್ನು ಕೇಳಿದಾಗ 1 ನೇ

ಆರೋಪಿಯು ಚಾಸಾ 8 ರವರಿಗೆ ನಿನಗೆ ಜಗಳ ಏತಕ್ಕೆ ಬೇಕು ಎಂದು ಕೇಳಿದ್ದ. ಆಗ ಚಾಸಾ 1 ಅಲ್ಲಿಗೆ ಬಂದು ಆರೋಪಿತರನ್ನು ಏಕೆ ಗಲಾಟೆ ಮಾಡುತ್ತೀರಾ ಎಂದು ಕೇಳಿದ್ದ. ನಂತರ ಆರೋಪಿತರು ನಿಮಗೆ ಇದೆ ವಾಲ್ಮೀಕಿ ಸೂಳೆ ಮಕ್ಕಳೇ ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಸದರಿ ಘಟನೆಯಾದ ಅರ್ಧ ಗಂಟೆಯ ನಂತರ ನ್ಯಾಯಾಲಯದ ಮುಂದೆ ಇರುವ 4 ಜನ ಆರೋಪಿತರು ಟಾಟಾ ಎ ಸಿ ವಾಹನದಲ್ಲಿ ಬಲ್ಲೀಸ್ ಕಟ್ಟಿಗೆಗಳನ್ನು ತೆಗೆದುಕೊಂಡು ಪುನಃ ಸ್ಥಳಕ್ಕೆ ಬಂದರು. 1 ನೇ ಆರೋಪಿಯು ಬಲ್ಲೀಸ್ ತೆಗೆದುಕೊಂಡು ಚಾಸಾ 1 ಈತನಿಗೆ ತಲೆಗೆ ಹೊಡೆಯಲು ಹೋದಾಗ ಅದು ಆತನ ಬಲ ಕಣ್ಣಿಗೆ ಬಿದ್ದು ಗಾಯವಾಗಿತ್ತು. ಆರೋಪಿ 2 ಚಾಸಾ 6 ರವರಿಗೆ ಬಲ್ಲೀಸ್ ನಿಂದ ಬಲ ಕಣ್ಣಿನ ಹುಬ್ಬಿಗೆ ಹೊಡೆದ. ಚಾಸಾ 1 ಕೆಳಗೆ ಬಿದ್ದಾಗ ಆರೋಪಿತರು ಆತನನ್ನು ಕಾಲಿನಿಂದ ತುಳಿದರು. ನಂತರ ಆರೋಪಿತರು ಅಲ್ಲಿಂದ ಟಾಟಾ ಎ ಸಿ ವಾಹನದಲ್ಲಿ ಓಡಿ ಹೋದರು. ಆರೋಪಿತರು ಬಂದಿದ್ದ ಗಾಡಿ ವಾಹನ ಸಂಖ್ಯೆಃ ಕೆ ಎ 34 ಎ 2341 ಆಗಿತ್ತು. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ಆರೋಪಿತರು ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-6 ಮತ್ತು 7 ರಲ್ಲಿರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ನಾನು ಡಿಪ್ಲಮೋ ಓದಿದ್ದೇನೆ. ನಾನು ವಿ ಆರ್ ಕೆ ಪಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. 2020 ರಿಂದ ನಾನು ಅಲ್ಲಿ ಕೆಲಸ ಮಾಡುತ್ತಿದ್ದೇನೆ. ಚಾಸಾ 1, 6 ಮತ್ತು 8 ರವರು ಸಂಬಂಧಿಕರು ಎಂದರೆ ಸರಿ. ನಾನು ಸಹ ಅವರು ಇರುವ ಏರಿಯಾದಲ್ಲಿಯೇ ವಾಸ ಮಾಡುತ್ತಿದ್ದೇನೆ. ಚಾಸಾ 7 ರವರನ್ನು ಈ ಪ್ರಕರಣದಲ್ಲಿ ಮೊದಲು ಆರೋಪಿಯನ್ನಾಗಿ ಮಾಡಲಾಗಿತ್ತು ಮತ್ತು ನಂತರ ತೆಗೆಯಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿಃ 10-9-2021 ರಂದು ಗಣೇಶನನ್ನು ಕೂರಿಸಿದ್ದೆವು. ಚಾಸಾ 1 ರವರಿಗೆ ಗಣೇಶನನ್ನು 5 ದಿವಸ ಕೂರಿಸಲು ಅನುಮತಿ ನೀಡಲಾಗಿತ್ತು. ಚಾಸಾ 7 ಈತನಿಗೆ ಗಣೇಶನನ್ನು 3 ದಿವಸ ಕೂರಿಸಲು ಅನುಮತಿ ನೀಡಲಾಗಿತ್ತು.

ನನ್ನ ಹೇಳಿಕೆ ಪ್ರಕಾರ ಅನಿಲ್ ಗಣೇಶನನ್ನು 12 ನೇ ತಾರೀಖಿನಂದು ಬಿಟ್ಟಿದ್ದ ಎಂದರೆ ಸರಿಯಲ್ಲ. ನಾವು ಕೂರಿಸಿದ್ದ ಗಣೇಶನ ಸ್ಥಳದಿಂದ ಕಪ್ಪಗಲ್ ರಸ್ತೆಯಲ್ಲಿರುವ ಕೆನಾಲ್ ಹತ್ತಿರ ಆಗುತ್ತಿತ್ತು ಎಂದರೆ ಸರಿ. ಗಾಂಧಿ ನಗರ ಮತ್ತು ಬನ್ನಿಕಟ್ಟೆ ಏರಿಯಾಗಳಲ್ಲಿ ಕೂರಿಸಿದ್ದ ಗಣೇಶನನ್ನು ಸಂಗನಕಲ್ಲು ರಸ್ತೆಯಲ್ಲಿರುವ ಕೆನಾಲ್‌ನಲ್ಲಿ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿಯಲ್ಲ. ಚಾಸಾ 7 ಗಣೇಶನನ್ನು ಸಂಗನಕಲ್ಲು ರಸ್ತೆಯಲ್ಲಿರುವ ಕೆನಾಲ್‌ನಲ್ಲಿ ವಿಸರ್ಜನೆ ಮಾಡಿದ್ದ ಮತ್ತು ಅಲ್ಲಿ ಯಾವುದೇ ಗಲಾಟೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು, ಅನಿಲ್ ಮತ್ತು ಕೌಶಿಕ್ ಒಂದೇ ಏರಿಯಾದವರು ಇರುವುದರಿಂದ ನಾನು ಚಾಸಾ 1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮು ಮಾ 1 ಮತ್ತು 2 ತರಹದ ಕಟ್ಟಿಗೆಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮು ಮಾ 1 ಮತ್ತು 2 ನಾನು ಗಲಾಟೆಯಾಗಿತ್ತು ಎಂದು ಹೇಳಿದ ಸ್ಥಳದಲ್ಲಿ ಸಿಕ್ಕಿಲ್ಲ ಎಂದರೆ ಸರಿಯಲ್ಲ.

ಆ ದಿವಸ ನಾನು ಕರ್ತವ್ಯಕ್ಕೆ ಹೋಗಿದ್ದರಿಂದ ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 1394 /2021**

**ಪ್ರಾಸಾಃ 11 ಚಾಸಾಃ- 13**

| | | |
|---|---|---|
| ಸಾಕ್ಷಿಯ ಹೆಸರು | : | ಎಲ್ಲಪ್ಪ |
| ತಂದೆಯ ಹೆಸರು | : | ಎರ್ರಿ ಬಸಪ್ಪ |
| ವಯಸ್ಸು | : | 35 ವರ್ಷ |
| ವೃತ್ತಿ | : | ಚಾಲಕ |
| ವಾಸಸ್ಥಳ | : | ಹಂದಿಹಾಳ್ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 23.6.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನ್ನದು ಟಾಟಾ ಎ ಸಿ ವಾಹನ ಇತ್ತು. ಅದರ ನಂಬರ್ ಈಗ ನೆನಪಿಲ್ಲ. ನಿಪಿ-6 ಮತ್ತು 7 ಪೋಟೋಗಳಲ್ಲಿ ಕಾಣುತ್ತಿರುವ ವಾಹನ ನನಗೆ ಸೇರಿತ್ತು. ಆರೋಪಿತರ ಪರಿಚಯ ಇದೆ. ನನ್ನ ವಾಹನವನ್ನು ಆರೋಪಿತರಿಗೆ ಗಣೇಶನನ್ನು ವಿಸರ್ಜನೆ ಮಾಡುವ ಸಲುವಾಗಿ ಈಗ ಸುಮಾರು 4 ವರ್ಷದ ಹಿಂದೆ ಕೊಟ್ಟಿದ್ದೆ. ನಾನು ಮಾರನೇ ದಿವಸ ಆರೋಪಿತರನ್ನು ವಾಹನದ ಬಗ್ಗೆ ಕೇಳಿದಾಗ ಅದನ್ನು ಪೋಲೀಸರು ತೆಗೆದುಕೊಂಡು ಹೋಗಿದ್ದರು ಎಂದು ಹೇಳಿದರು. ಯಾರದೋ ಜಗಳದ ಬಗ್ಗೆ ಪೋಲೀಸರು ಅದನ್ನು ತೆಗೆದುಕೊಂಡು ಹೋಗಿದ್ದರು ಎಂದು ಗೊತ್ತಾಯಿತು. ಯಾರ ಯಾರ ನಡುವೆ ಜಗಳ ಆಗಿತ್ತು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ಆ ದಿವಸ ಆರೋಪಿತರು ಚಾಸಾ 1 ಮತ್ತು 7 ರವರ ಜೊತೆ ಜಗಳ ಆಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 18-9-2021 ರಂದು ನಾನು ಈ ಪ್ರಕರಣದಲ್ಲಿ ಪೋಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ

" ದಿಃ 12-9-2021 ರಂದು ರಾತ್ರಿ --- ಉಪಯೋಗಿಸಿರುತ್ತಾರೆ " ಎಂದು ತಿಳಿಯಿತು ಎಂದು ಹೇಳಿಕೆಯನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು. ನಿಪಿ-15 ರಂತೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಮತ್ತು ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ವಾಹನ ಸಂಖ್ಯೆ ಕೆಎ 34 ಎ 2341 ನನ್ನ ಹೆಸರಿನಲ್ಲಿ ಇಲ್ಲ. ಆರೋಪಿತರು ನನ್ನಿಂದ ಸದರಿ ವಾಹನವನ್ನು ಯಾವತ್ತೂ ತೆಗೆದುಕೊಂಡು ಹೋಗಿರಲಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 1394 /2021**

**ಪ್ರಾಸಾಃ 12 ಚಾಸಾಃ- 17**

| | | |
|---|---|---|
| ಸಾಕ್ಷಿಯ ಹೆಸರು | : | ಹೊನ್ನೂರಪ್ಪ |
| ತಂದೆಯ ಹೆಸರು | : | ರುದ್ರಪ್ಪ |
| ವಯಸ್ಸು | : | 59 ವರ್ಷ |
| ವೃತ್ತಿ | : | ಸಹಾಯಕ ಅಭಿಯಂತರರು, ಪಿ ಡಬ್ಲ್ಯೂಡಿ ಇಲಾಖೆ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 23.6.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಬಳ್ಳಾರಿಯ ಪಿ ಡಬ್ಲ್ಯೂಡಿ ಇಲಾಖೆಯಲ್ಲಿ ಸೆಕ್ಷನ್ ಆಫೀಸರ್ ಎಂದು 5 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ದಿಃ 4-10-2021 ರಂದು ಡಿ ವೈ ಎಸ್ ಪಿ ರವರ ಕೋರಿಕೆಯ ಮೇರೆಗೆ ನಾನು ಘಟನೆಯ ಸ್ಥಳವಾದ ಕೆ ಹೆಚ್ ಬಿ ಕಾಲೋನಿ ಬನ್ನಿಕಟ್ಟೆ ಪಾರ್ಕ್ ಮುಂಭಾಗಕ್ಕೆ ಹೋಗಿದ್ದೆ. ಚಾಸಾ 20 ರವರು ಸದರಿ ಸ್ಥಳವನ್ನು ನನಗೆ ತೋರಿಸಿದ್ದರು. ನಾನು ಸದರಿ ಸ್ಥಳದ ಸ್ಥಿತಿಗತಿ ಕುರಿತು ನಕಾಶೆಯನ್ನು ತಯಾರಿಸಿ ಎ ಇ ಇ ಕಚೇರಿಯಿಂದ ಡಿ ವೈ ಎಸ್ ಪಿ ರವರಿಗೆ ನೀಡಿದ್ದೆವು. ಸದರಿ ನಕಾಶೆಯನ್ನು ನೋಡುತ್ತಿದ್ದು ಅದನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ನಿಪಿ-17 ಪತ್ರದೊಂದಿಗೆ ಸದರಿ ನಕಾಶೆಯನ್ನು ಕಳುಹಿಸಿಕೊಡಲಾಗಿತ್ತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ನಾನು ಸ್ಥಳಕ್ಕೆ ಹೋಗದೇ ನಮ್ಮ ಕಚೇರಿಯಲ್ಲಿಯೇ ಡಿ ವೈ ಎಸ್ ಪಿ ರವರ ಕೋರಿಕೆ ಮೇರೆಗೆ ಸುಳ್ಳು ನಕಾಶೆಯನ್ನು ನಿಪಿ-16 ರಂತೆ ತಯಾರಿಸಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಸ್ಥಳದ ಚೆಕ್ ಬಂದಿಯನ್ನು ನಕಾಶೆಯಲ್ಲಿ ನಮೂದಿಸಿಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

### ಸತ್ರ ಮೊಕದ್ದಮೆ ಸಂಖ್ಯೆಃ- 1394 /2021

**ಪ್ರಾಸಾಃ 13 ಚಾಸಾಃ- 19**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ್ ನಾಯಕ್ |
| ತಂದೆಯ ಹೆಸರು | : | ಸಕ್ರೂ ನಾಯಕ್ |
| ವಯಸ್ಸು | : | 39 ವರ್ಷ |
| ವೃತ್ತಿ | : | ಸಹಾಯಕ ಇಂಜನೀಯರ್, ಜೆಸ್ಕಾಂ ಇಲಾಖೆ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 23.6.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 2015 ರಿಂದ ಜೆಸ್ಕಾಂ ಬಳ್ಳಾರಿಯಲ್ಲಿ ಸೆಕ್ಷನ್ ಆಫೀಸರ್ ಎಂದು ಕೆಲಸ ಮಾಡುತ್ತಿದ್ದೇನೆ. ಗಾಂಧಿನಗರ ಕೆ ಹೆಚ್ ಬಿ ಕಾಲೋನಿ ಬನ್ನಿಕಟ್ಟೆ ಪಾರ್ಕ್ ಪ್ರದೇಶ ನಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ದಿಃ 12-9-2021 ರಂದು ಡಿ ವೈ ಎಸ್ ಪಿ ರವರು ನಮ್ಮ ಕಚೇರಿಗೆ ಪತ್ರ ಬರೆದು ದಿಃ 12-9-2021 ರಂದು ರಾತ್ರಿ 10-00 ರಿಂದ 11-00 ಗಂಟೆವರೆಗೆ ಬನ್ನಿಕಟ್ಟೆ ಪಾರ್ಕ್ ಏರಿಯಾದಲ್ಲಿ ವಿದ್ಯುತ್ ಸಂಪರ್ಕ ಇತ್ತು ಇಲ್ಲವೋ ಎಂಬುದರ ಬಗ್ಗೆ ಸರ್ಟಿಫಿಕೇಟ್ ಕೊಡುವಂತೆ ಕೇಳಿದ್ದರು. ನಾನು ಎ ಇ ಇ, ಕೆ ಪಿ ಟಿ ಸಿ ಎಲ್ ನಾರ್ತ್ ಸ್ಟೇಷನ್ ರವರಿಂದ ಅಭಿಪ್ರಾಯವನ್ನು ಪಡೆದುಕೊಂಡಿದ್ದೆ. ಸದರಿಯವರು ಮೇಲೆ ಅವಧಿಯಲ್ಲಿ ವಿದ್ಯುತ್ ಸೌಲಭ್ಯ ಇದ್ದ ಬಗ್ಗೆ ಅಭಿಪ್ರಾಯ ನೀಡಿದ್ದರು. ಸದರಿ ಅಭಿಪ್ರಾಯ ಪತ್ರವನ್ನು ನಿಪಿ-18 ಎಂದು ಗುರುತಿಸಲಾಯಿತು. ಅದರಂತೆ ನಾನು ಡಿ ವೈ ಎಸ್ ಪಿ ರವರಿಗೆ ದಿಃ 25-11-2021 ರಂದು ನನ್ನ ವರದಿಯನ್ನು ನೀಡಿದ್ದು ಸದರಿ ವರದಿಯನ್ನು ನಿಪಿ-19 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ಡಿ ವೈ ಎಸ್ ಪಿ ರವರಿಂದ ನನಗೆ ಯಾವುದೇ ಪತ್ರ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರದ ಪ್ರತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಂಗತಿಗಳಿಂದ ಕೂಡಿದ ಸುಳ್ಳು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**